ಆ ರಾತ್ರಿ ಅವಳಿಗೆ ಮರೆಯಲಾರದ ನೆನಪು. ಆಕೆ ಉಲ್ಲಾಸದಿಂದ, ಆನಂದದಿಂದ ಖುಷಿಯಿಂದ ಹೊಸ ಉದ್ವೇಗಕ್ಕೆ ಒಳಗಾಗಿದ್ದಳು. ಅವನ ದನಿ ವಿಶೇಷವಾಗಿ ವಾದ್ಯವೊಂದನ್ನು ಬಾರಿಸುತ್ತಿರುವಂತೆ. ಅವನ ಹರಟೆ ಕೇಳುತ್ತಿದ್ದರೆ ಸಂಗೀತ ಗಮಕಗಳನ್ನು ಕೇಳುತ್ತಿದ್ದಂತೆ ಅನಿಸುತ್ತಿತ್ತು. ತನ್ನ ಡೈರಿ ಎಂದು ಬ್ರೈಲ್ ಲಿಪಿಯಲ್ಲಿದ್ದ ಪುಸ್ತಕವನ್ನು ತೋರಿಸಿದ. ಅದರೊಳಗಿಂದ ಎಷ್ಟೊಂದು ಮುಖ್ಯವಾದ ಪ್ಯಾರಾಗಳನ್ನು ಆಕೆಗೆ ಓದಿ ಕೇಳಿಸಿದ. ಅವನು ತೆಗೆದ ಫೋಟೊಗಳನ್ನು ರಾಶಿಯಾಗಿ ಆಕೆ ಎದುರು ಸುರಿದ. 'ಇವು ಫೋಟೊಗಳಲ್ಲ ಪ್ರವಚನಗಳು. ಭವಿಷ್ಯತ್‌ಗಾಥೆಗಳು' ಎಂದ. ಆ ಫೋಟೊಗಳೆಲ್ಲಾ ಕತ್ತಲಿನಂತೆ ಅಸಂಪೂರ್ಣವಾಗಿದ್ದವು. ಅದೇ ಮಾತನ್ನು ಅವನೊಂದಿಗೆ ಹೇಳಿದಳು, 'ಹೌದು. ಜಗತ್ತೆಲ್ಲಾ ದುಃಖವೇ. ಮುಕ್ತಾಯಕ್ಕೆ ಹತ್ತಿರವಾಗಿದೆ' ಎಂದ. ಅವನ ಮಾತುಗಳು ರೇಡಿಯೋದ ವಾರ್ತೆಗಳನ್ನು ನೆನಪಿಸುತ್ತಿದ್ದವು. ಅವನು ಊಟ ಮಾಡುವ ರೀತಿ ಆಕೆಗೆ ಆಶ್ಚರ್ಯವಾಯಿತು. ಆಕೆಯ ಸಹಾಯವಿಲ್ಲದಂತೆ ತಾನೇ ಬಡಿಸಿಕೊಂಡ. ಫಿಶ್, ಸಿಗಡಿ ಅಡುಗೆಗಳನ್ನು ಆಕೆ ಎಂಜಾಯ್ ಮಾಡಿದಳು.

ಕೊನೆಯಲ್ಲಿ ರೆಡ್‌ವೈನ್ ಬಾಟಲ್ ತೆಗೆದು, 'ನಿದ್ರೆಯಲ್ಲಿ ಸುಂದರವಾದ ಕನಸುಗಳಿಗಾಗಿ ಇದು ಅವಶ್ಯ' ಎಂದ. ಆಕೆ ಆ ರಾತ್ರಿಯನ್ನು ಕನಸಿನಂತೆ ಕಳೆದಳು. ಆಕೆ ಹೊರಡುವ ಮುಂಚೆ ಆಕೆಯ ಫೋಟೊ ತೆಗೆಯುತ್ತೇನೆಂದ. ಫ್ಲಾಶ್ ಆಕೆಯ ಮುಖದ ಮೇಲೆ ಮಿಂಚಿತು. ಫೋಟೊವನ್ನು ಆಕೆಯ ಕೈಯಲ್ಲಿಟ್ಟು ವಿವರಿಸಲು ಹೇಳಿದ. ಅದರಲ್ಲಿ ಆಕೆಯ ಮುಖ ಸ್ಪಷ್ಟವಾಗಿರಲಿಲ್ಲ. ಮುಖದ ಮೇಲೆ ತೆಳುವಾದ ನೆರಳು ಆವರಿಸಿದಂತಿತ್ತು. ಫೋಟೊದಲ್ಲಿನ ವಿವರಗಳನ್ನು ಕೇಳಿಸಿಕೊಂಡು ಗಾಢವಾಗಿ ನಿಟ್ಟುಸಿರು ಬಿಟ್ಟ ಸತ್ಯಸುಂದರ್. 'ನೀವು ದುಃಖದಲ್ಲಿದ್ದೀರಿ. ಆತಂಕದಲ್ಲಿದ್ದೀರಿ. ತೂಫಾನಿನಲ್ಲಿ ಸಿಕ್ಕಿಕೊಂಡ ದೋಣಿಯಂತೆ ಅಲ್ಲೋಲ ಕಲ್ಲೋಲವಾಗಿದ್ದೀರಿ' ಎಂದ. ಅದ್ಭುತಗಳನ್ನು, ದೇವರನ್ನು ನಂಬದ ಆಕೆಗೆ ಉಸಿರುಗಟ್ಟಿದಂತಾಯಿತು.

ದೇವರನ್ನು ಹತ್ತಿರದಿಂದ ನೋಡಿದಂತಾಯಿತು. ಭಯದಿಂದ ಫೋಟೊವನ್ನು ಕೈಗೆ ತೆಗೆದುಕೊಂಡಳು. ತನ್ನ ಮುಖವನ್ನಲ್ಲದೇ ಮನಸ್ಸನ್ನು ಫೋಟೊ ತೆಗೆದಂತಿತ್ತು. ಸತ್ಯಸುಂದರ್ ಆಕೆಯ ಕೈಯನ್ನು ಪ್ರೀತಿಯಿಂದ ಅಮುಕಿದ. ಆ ರಾತ್ರಿ ಸತ್ಯಸುಂದರ್ ಆಕೆಗೊಂದು ಫ್ರೂಟ್‌ಕೇಕನ್ನು ಕಾಣಿಕೆಯಾಗಿ ನೀಡಿದ. ಗಾಢ ನಿದ್ರೆಯಲ್ಲಿ ಅವಳು ಸರೋವರ, ಹಕ್ಕಿಗಳ ಕಲರವಗಳ ಕನಸು ಕಂಡಳು. ಸರೋವರವನ್ನು ತನ್ನ ಬಾಹುಗಳಲ್ಲಿ ತೆಗೆದುಕೊಂಡು, ತನ್ನ ದೇಹದ ಸುತ್ತಲೂ ಹೊದ್ದುಕೊಂಡು ನಿದ್ರೆ ಹೋದಳು. ಮರುದಿನ ಆಕೆ ನಿದ್ದೆಯಿಂದ ಏಳುವಷ್ಟರಲ್ಲಿ ಹನ್ನೊಂದು ಗಂಟೆಯಾಗಿತ್ತು. ನಿದ್ರೆಯಿಂದ ಏಳುತ್ತಲೇ ಆಕೆಗೆ ಸತ್ಯಸುಂದರ್‌ನನ್ನು ನೋಡಬೇಕೆನಿಸಿತು.

ಸತ್ಯಸುಂದರ್ ರೋಮ್ಯಾಂಟಿಕ್ ಆಗಿ ರೆಡಿಯಾಗಿದ್ದ. ಉದ್ದನೆಯ ಕೂದಲಿಗೆ ಮಿರಮಿರನೆ ಮಿಂಚುವಂತೆ ಎಣ್ಣೆ ಹಚ್ಚಿಕೊಂಡು ಹಳೆಯ ಕಾಲದ ಕವಿಗಳಂತೆ ತಲೆಯನ್ನು ಹಿಂದಕ್ಕೆ ಬಾಚಿದ್ದ. ಪೊದೆಯಂಥ ಗಡ್ಡವನ್ನು ನೀಟಾಗಿ ಬಾಚಿಕೊಂಡು ಬಿಳಿ ಜುಬ್ಬಾ, ಪಾಯಿಜಾಮ ದುಂಡನೆ ಚಷ್ಮಾ ಧರಿಸಿದ್ದ. ಭುಜಕ್ಕೆ ಲೆದರ್‌ಬ್ಯಾಗ್ ಇಳಿಬಿಟ್ಟುಕೊಂಡಿದ್ದ. ಸುಂದರ್ ಹೇಳಿದಂತೆ ಆ ದಿನ ಮಳೆ ಬರಲಿಲ್ಲವಾಗಲಿ, ಮಬ್ಬುಕವಿದ ಆಕಾಶ ಸೂರ್ಯನನ್ನು ಬಹಿಷ್ಕರಿಸಿದಂತೆ ಕಾಣುತ್ತಿತ್ತು.

ಸುಂದರ್ ಹತ್ತು ಕಿಲೋಮೀಟರ್ ದೂರದಲ್ಲಿನ 'ಬಾಲೂಗಾವ್'ಗೆ ಗೈಡ್ ಸಹಾಯದಿಂದ ಒರಿಯಾ ಸಿನಿಮಾ ನೋಡಲು ಹೋಗುತ್ತಿದ್ದ. ಆಕೆಗೆ ಕುರುಡನೊಬ್ಬ ಸಿನಿಮಾ ನೋಡೋದು, ಆ ಯೋಚನೆಯೇ ವಿಚಿತ್ರವೆನಿಸಿತು. 'ಯಾವುದೇ ಒಳ್ಳೆಯ ಅನುಭವವನ್ನು ಮಿಸ್ ಮಾಡಿಕೊಳ್ಳಲು ಸಿದ್ಧನಿಲ್ಲ ನಾನು' ಎಂದ ಸತ್ಯಸುಂದರ್. ಅವನೊಂದಿಗೆ ಸೇರಿಕೊಂಡು ಸಿನಿಮಾ ನೋಡಬೇಕೆಂದುಕೊಂಡಳು.

ಸಿನಿಮಾ ಥಿಯೇಟರ್ ಪುರಾತನವಾದ ಭವನದಂತಿತ್ತು. ಥಿಯೇಟರಿನೊಳಗೆ ಹತ್ತು ಜನರು ಕೂಡಾ ಇರಲಿಲ್ಲ. ಅವರು ಸೀಟಿನಲ್ಲಿ ಕುಳಿತುಕೊಳ್ಳುತ್ತಿದ್ದಂತೆ ಯಾವ ಮುನ್ಸೂಚನೆ ಇಲ್ಲದಂತೆ ಸಿನಿಮಾ ಆರಂಭವಾಯಿತು. ಆ ಸಿನಿಮಾದ ಹೆಸರು 'ಮನೋರಂಜನ್‌ಮಹಂತಿ ಹೆಂಡತಿಯ ಕಥೆ'. ಅವರಿಬ್ಬರಿಗೂ ಒರಿಯಾ ಬರುವುದಿಲ್ಲ. ಗೈಡ್ ಮೇಲೆ ನಂಬಿಕೆ ಇತ್ತು. ಒಂದೂ ದೃಶ್ಯವನ್ನು ಬಿಡದಂತೆ ವಿವರಿಸುತ್ತಿದ್ದ. ಗೈಡ್‌ಗೆ ತೆಲುಗು ಬರುತ್ತಿತ್ತಾದರೂ ಇಂಗ್ಲಿಷಿನಲ್ಲಿ ಅನುವಾದ ಮಾಡಲು